**ECA 22-23** **PW :1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 22.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ ಎಸ್ ಆರ್ ಜಿ, ವಕೀಲರಿಂದಃ**

3. ನಮ್ಮ ತಂದೆ ಬಸವರಾಜ ಎಂಬುವವರ ಬಳಿ ಕೆಲಸಕ್ಕೆ ಹೋಗುತ್ತಿದ್ದರು ಅಂದರೆ, ಬಸವರಾಜ ಹಾಗೂ ಸಿ ಕೆ ಮೂರ್ತಿ ಎಂಬುವವರು ಇಬ್ಬರೂ ಒಂದೆ. ಅವರ ಬಳಿ ಕೆಲಸಕ್ಕೆ ಹೋಗುತ್ತಿದ್ದರು. ಬಸವರಾಜ ರಾಮಣ್ಣ ಜಾಧವ ನಮ್ಮ ಚಿಕ್ಕಪ್ಪ. ನಮ್ಮ ಚಿಕ್ಕಪ್ಪನೇ ದೂರು ನೀಡಿದ್ದಾನೆ. ದೂರಿನಲ್ಲಿ ದಿಃ 14.3.2022 ರಂದು ಬೆಃ 10 ಗಂಟೆಗೆ ಎಂದಿನಂತೆ ಲಾರಿ ಕ್ಲೀನರ ಕೆಲಸಕ್ಕೆ ಹೋಗಿದ್ದು, ಈ ದಿನ ಮಃ 3.30 ಗಂಟೆಗೆ ಸಿಲ್ವರ ಕಟ್ ಪೀಸಗಳನ್ನು ಎಪಿ-02/ಟಿಸಿ-1356 ನಂಬರಿನ ಲಾರಿಯಲ್ಲಿ ಲೋಡ ಮಾಡಿಕೊಂಡು ಚಿಕ್ಕಮಗಳೂರಿನಿಂದ ಹೊರಟು ಕಡೂರ ಮಾರ್ಗವಾಗಿ ಸುಮಾರು 4 ಗಂಟೆಗೆ ಲಕ್ಕೆ ಕ್ರಾಸ್ ಬಳಿ ಹೋಗುತ್ತಿರುವಾಗ ಸದರಿ ಚಾಲಕನು ತನ್ನ ಲಾರಿಯನ್ನು ದುಡುಕಿನಿಂದ -ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ಅಂದರೆ, ಕಡೂರ ಕಡೆಯಿಂದ ಬರುತ್ತಿದ್ದ ಟ್ರ್ಯಾಕ್ಟರ ನಂಃ ಕೆಎ-66/ಟಿ-3764 ಆಗಿದ್ದು, ಟ್ರೇಲರ ನಂಃ ಕೆಎ-66 /ಟಿ-3765 ಡಿಕ್ಕಿಪಡಿಸಿದ ಪರಿಣಾಮ ಲೋಡ ತುಂಬಿಕೊಂಡಿದ್ದ ಲಾರಿ ಮುಗುಚಿ ಟ್ರ್ಯಾಕ್ಟರ ಮೇಲೆ ಬಿದ್ದಿದೆ ಎಂದು ಬರೆಯಲಾಗಿದೆ ಅಂದರೆ, ಗಡಿಬಿಡಿಯಲ್ಲಿ ಬರೆದಿದ್ದಾರೆಂದು ಹೇಳುತ್ತಾರೆ. ಮರು ಹೇಳಿಕೆಯಲ್ಲಿ ನನ್ನ ಅಣ್ಣ ನಾಗರಾಜ ರಾಮಣ್ಣ ಜಾಧವ ರವರು ಬಸವರಾಜ ಎಂಬುವವರ ಬಳಿ ಕೂಲಿ ಕೆಲಸ ಮಾಡಿಕೊಂಡಿದ್ದು ಅಂತಾ ಬರೆಯಲಾಗಿದೆ ಅಂದರೆ ಸರಿ. ಸದರಿ ಹೇಳಿಕೆ ಭಾಗವನ್ನು ನಿಆರ್-1 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಅಪರಾಧ ವಿವರ ನಮೂನೆ, 5 ನೇ ಪ್ಯಾರಾದಲ್ಲಿರುವ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯೂ ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ಭಾಗವನ್ನು ನಿಆರ್ -2 ಎಂದು ಗುರುತಿಸಲಾಯಿತು. ನಮ್ಮ ಚಿಕ್ಕಪ್ಪನನ್ನು ಕರೆದು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ನಮ್ಮ ತಂದೆ ಆ ದಿನ ಲಾರಿ ಚಾಲಕನ ಬಳಿ ಕೂಲಿ ಕೆಲಸಕ್ಕೆ ಹೋಗಿದ್ದರು ಅಂದರೆ ಸರಿಯಲ್ಲ. ಟ್ರಕ್ ಗೆ ವಿಮೆ ಇಲ್ಲದ ಕಾರಣ, ಟ್ರ್ಯಾಕ್ಟರ ಟ್ರೇಲರನ ಮೇಲೆ ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ. ಪೋಲಿಸ ದಾಖಲೆಗಳ ಪ್ರಕಾರ ನಮ್ಮ ತಂದೆ ಟ್ರಕ್ ಕ್ಯಾಬಿನದಲ್ಲಿ ಕುಳಿತುಕೊಂಡು ಹೊರಟಿದ್ದರು ಅಂದರೆ ಸರಿಯಲ್ಲ. ಟ್ರಕ್ ಗೆ ವಿಮೆ ಇಲ್ಲದ ಕಾರಣ ಟ್ರ್ಯಾಕ್ಟರ ಮೇಲೆ ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ. ಬಸವರಾಜ ಹಾಗೂ ಮೂರ್ತಿ ಇಬ್ಬರುಾ ಒಬ್ಬರೇ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ECA 22-23** **PW :1**

ಪರಿಹಾರಗೋಸ್ಕರ ಟ್ರ್ಯಾಕ್ಟರ ಮೇಲೆ ಸುಳ್ಳು ಕೇಸ ಹಾಕಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.